**ಅಸಲು ದಾವಾ ಸಂಖ್ಯೆ: 879/2023**

**ಪಿಡಬ್ಲೂ -1**

**ದಿಃ 17-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ. MMH ರವರಿಂದಃ-**

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ಪ್ರತಿವಾದಿಯರು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮೋಸದಿಂದ ಕ್ರಯ ಪತ್ರ ಮಾಡಿಕೊಟ್ಟಿರುವ ಬಗ್ಗೆ ನಾನು ಅವರ ವಿರುದ್ಧ ಮಾನ್ಯ 2ನೇ ಜೆ ಎಮ್ ಎಫ್ ಸಿ ನ್ಯಾಯಾಲಯದ ಮುಂದೆ ದಾಖಲು ಮಾಡಿದ ಖಾಸಗಿ ಫಿರ್ಯಾದಿ ಹಾಗೂ ಅದರ ಆಧಾರದ ಮೇಲೆ ದಾಖಲಾದ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-1 ಮತ್ತು 2 ಎಂದು,

ನನ್ನ ಖಾತೆ ಇರುವ ಪಂಜಾಬ ನ್ಯಾಷನಲ್ ಬ್ಯಾಂಕನವರಿಗೆ ನಾನು ನನ್ನ ಸಹಿ ಪರಿಶೀಲನಾ ಬಗ್ಗೆ ನೀಡಿದ ಅರ್ಜಿ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-3 ಎಂದು,

ನನ್ನ ಸರಿಯಾದ ಸಹಿ ತೋರಿಸಲು ನನ್ನ ಪಿಯುಸಿ ಹಾಗೂ ಎಸ್ ಎಸ್ ಎಲ್ ಸಿ ಅಂಕಪಟ್ಟಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-4 ಮತ್ತು 5 ಎಂದು,

ನನ್ನ ಅಂಗವೈಕಲ್ಯ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-6 ಎಂದು,

ನನ್ನ ತಂದೆ ರಾಜಶೇಖರ ರವರ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-7 ಎಂದು,

ನನ್ನ ಪ್ಯಾನ ಕಾರ್ಡನ ಪ್ರತಿ ಹಾಜರುಪಡಿಸಿರುತ್ತೇನೆ. ಅದನ್ನು ಅದರ ಮೂಲ ದಾಖಲೆಯೊಂದಿಗೆ ಹೋಲಿಕೆ ಮಾಡಿ ನೋಡಿ ನಿಪಿ-8 ಎಂದು ಗುರುತಿಸಿ, ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

**ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶವನ್ನು ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**